20-30 ವರ್ಷಗಳಿಂದ ಕಾಂಪೋಸ್ಟ್ ಗೊಬ್ಬರ ಮಾಡಿ ಮಾಡಿ ಎಂದು ಹೇಳುತ್ತಿದ್ದೇವೆ ಅದನ್ನು ರೈತರು ಕಿವಿಗೆ ಹಾಕಿಕೊಳ್ಳುತ್ತಿಲ್ಲ. ಈಗ ಅದನ್ನು ವಿಧಿ ಇಲ್ಲದೆ ಇನ್ನು ಮೇಲೆ ಅವರು ಆರ್ಗಾನಿಕ್ ಮೆನ್ಯೂರ್ ಹಾಕಲೇಬೇಕಾಗುತ್ತದೆ. ಏಕೆಂದರೆ ಫರ್ಟಿಲೈಸರ್ಸ್ ಬೆಲೆ ಜಾಸ್ತಿ ಆಗುತ್ತಾ ಇದೆ. ಈಗ ಹಳೆಯ ಕಾಲದಲ್ಲಿ ಏನು ಮೆತೆಡ್ ಇತ್ತು ಕೆರೆಗಳಲ್ಲಿ ಮಣ್ಣು ಹೊಡೆಯುವುದನ್ನು ನಾವು ಬಿಟ್ಟು ಬಿಟ್ಟಿವು. ಗೋಡು ಮಣ್ಣು ಹೊಡೆಯುವುದನ್ನು ಬಿಟ್ಟಿದ್ದೇವೆ. ಬರೇ ಕೆಮಿಕಲ್ ಫರ್ಟಿಲೈಸರ್ಸ್ ಯೂಸ್ ಮಾಡಿ ಬಹಳ ದಿವಸ ವ್ಯವಸಾಯ ಮಾಡುವುದಕ್ಕೆ ಆಗುವುದಿಲ್ಲ ಎನ್ನುವುದು ರೈತರಿಗೆ ಈಗ ಅರ್ಥ ಆಗಿದೆ. ಹೆಚ್ಚು ಹೆಚ್ಚು ಪ್ರಚಾರಕ್ಕೆ ಏನು ಕ್ರಮ ಬೇಕೋ ಮಾಡುತ್ತೇವೆ. ಎರೆಹುಳಕ್ಕೆ ಕೆಲವು ಕಡೆ ಸಬ್ಸಿಡಿ ಕೂಡ ಕೊಡುತ್ತಿದ್ದೇವೆ. ಎರೆಹುಳದ ಬಗ್ಗೆ ತಾವೇನು ಹೇಳುತ್ತಿದ್ದೀರಿ. ಅದು ಬಹಳ ಒಳ್ಳೆಯ ಸಜೆಕ್ಷನ್ ಅದಕ್ಕೆ ಸಬ್ಸಿಡಿ ಕೂಡ ಕೊಡಬೇಕೆಂದು ಹೇಳಿ ಒಂದು ತಾಲ್ಲೂಕಿಗೆ 20-30 ಜನರಿಗೆ ಸಬ್ಸಿಡಿ ಕೊಟ್ಟು ಅದನ್ನು ಕೂಡ ಬೆಳೆಸಬೇಕು, ಆಂತಹ ಗೊಬ್ಬರಗಳನ್ನು ಉಪಯೋಗಿಸಬೇಕು ಎಂದು ಹೇಳಿ ಸರ್ಕಾರ ಆ ದಿಸೆಯಲ್ಲಿ ಈಗ ಕಾರ್ಯಕ್ರಮಗಳನ್ನು ಕೈಗೊಂಡಿದೆ.

ಶ್ರೀ ಟಿ.ಬಿ. ಜಯಚಂದ್ರ : ಸಬ್ಸಿಡಿ ಕೊಡತಕ್ಕ ಪದ್ಧತಿ ಇದೆ. ಆದರೆ ಅದನ್ನು ಎಲ್ಲೂ ಕೊಟ್ಟಿಲ್ಲ. ಇಲ್ಲಿಯವರೆಗೆ ಆ ಪದ್ಧತಿ ಜಾರಿಗೆ ಬಂದಿಲ್ಲ. ದಯಮಾಡಿ ನೀವು ಕೊಡತಕ್ಕ ಸಬ್ಸಿಡಿ ಕೊನೆಯಪಕ್ಷ ಅರ್ಧದಷ್ಟಾದರೂ ಕೊಟ್ಟರೆ ಅದು ಪ್ರಚಾರಕ್ಕೆ ಅನುಕೂಲ ಆಗುತ್ತದೆ ಎನ್ನುವ ದೃಷ್ಟಿಯಿಂದ ಈ ಪ್ರಶ್ನೆ ಕೇಳಿರತಕ್ಕದ್ದು. ದಯಮಾಡಿ ಇದರ ಬಗ್ಗೆ ಯೋಚಿಸಿ . ಸ್ವತಃ ತಾವು ರೈತರಾದ್ದರಿಂದ ಈ ಬಗ್ಗೆ ಹೆಚ್ಚಾಗಿ ಹೇಳತಕ್ಕ ಅವಶ್ಯಕತೆ ಇಲ್ಲ. ನೀವು ಇದರ ಬಗ್ಗೆ ಹೆಚ್ಚಿನ ಒಂದು ಕಾರ್ಯಕ್ರಮವನ್ನು ಹಾಕಿದರೆ ಬಹಳ ಸೂಕ್ತ ಎಂಬ ಒಂದು ಸಲಹೆಯನ್ನು ಕೊಡುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ : ಆಯಿತು, ಇದನ್ನು ಒಪ್ಪಿಕೊಳ್ಳುತ್ತೇನೆ.

ಮೈಸೂರು ಕೆಬಿಬಿಸಿ ಮುಚ್ಚಿರುವ ಬಗ್ಗೆ.

302 - ಶ್ರೀ ಹೆಚ್.ಎನ್. ಶಂಕರಲಿಂಗೇಗೌಡ : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮೈಸೂರು ಕರ್ನಾಟಕ ಬಾಲ್ ಬೇರಿಂಗ್ ಕಂಪನಿ (ಕೆಬಿಬಿಸಿ) ಕಾರ್ಖಾನೆಯು ಮುಚ್ಚಿ ಇಲ್ಲಿನ ಕಾರ್ಮಿಕರು ಬೀದಿಪಾಲಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೆ?*

ಆ) *ಈ ಕಾರ್ಖಾನೆಯನ್ನು ತೆರೆಯುವ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?*

ಇ) *ಈ ಕಾರ್ಖಾನೆಯನ್ನು ತೆರಸಲು ಎಷ್ಟು ಕಾಲಾವಕಾಶ ಬೇಕಾಗುವುದು?*

ಶ್ರೀ ಸಿ. ಗುರುನಾಥ್ (ಕಾರ್ಮಿಕ ಸಚಿವರು) :

ಅ) ಬಂದಿದೆ

ಆ) ಕಾರ್ಖಾನೆ ಪುನರಾರಂಭಿಸುವ ಬಗ್ಗೆ ಸಂಧಾನ ಸಭೆ ನಡೆಸಿ ಒಪ್ಪಂದವೊಂದನ್ನು ಮಾಡಲಾಯಿತು. ಆದರೆ ಒಪ್ಪಂದವನ್ನು ಅನುಷ್ಠಾನಕ್ಕೆ ತರದೆ ಇರುವುದರಿಂದ ಆಡಳಿತ ವರ್ಗದವರ ವಿರುದ್ಧ ಮೊಕದ್ದಮೆ ಹೂಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಕಾರ್ಖಾನೆಯನ್ನು ಪುನರಾರಂಭಿಸುವ ಬಗ್ಗೆ ನಿಗದಿತ ಸಮಯವನ್ನು ಹೇಳಲು ಬರುವುದಿಲ್ಲ. ಆದಾಗ್ಯೂ ಸದರಿ ಕಾರ್ಖಾನೆಯನ್ನು ಪುನಃ ಪ್ರಾರಂಭಿಸಲು ಕೂಡಲೆ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಎಚ್.ಎಸ್. ಶಂಕರಲಿಂಗೇಗೌಡ : ಮಾನ್ಯ ಅಧ್ಯಕ್ಷರೆ ಉತ್ತರ ಸಮರ್ಪಕವಾಗಿಲ್ಲ. ಕಾರಣ ಏನೆಂದರೆ ಈ ಮಹತಾ ಗುಂಪಿನವರು ಕರ್ನಾಟಕದಲ್ಲಿ ಹಲವಾರು

ಕಂಪನಿಗಳನ್ನು ಹುಟ್ಟು ಹಾಕುವುದು, ಮುಚ್ಚುವುದು, ರೋಗಗ್ರಸ್ಥಗೊಳಿಸುವುದು ಇವರ ಕಸುಬು ಆಗಿಬಿಟ್ಟಿದೆ. ಇವತ್ತು ಕೆಬಿಬಿಸಿ ಕಾರ್ಖಾನೆಯು ಸುಮಾರು 500 ಕ್ಕೂ ಹೆಚ್ಚು ಮಂದಿ ಕಾರ್ಮಿಕರು ಬೀದಿ ಪಾಲಾಗಿ ಅವರ ಜೀವನ ತುಂಬಾ ಕಷ್ಟದ ಪರಿಸ್ಥಿತಿಯಲ್ಲಿದೆ. ಈಗಾಗಲೇ ಅವರ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳುವ ಬಗ್ಗೆ ಉತ್ತರದಲ್ಲಿ ಹೇಳಿದ್ದಾರೆ. ಅದನ್ನು ತೆಗೆದುಕೊಂಡು ಮೂರು ವರ್ಷದಿಂದ ಅದು ಕೋಟಿ ರೂಪಾಯಿ ಅವರಿಗೆ ಕೊಡಬೇಕಾಗಿರತಕ್ಕ ಸಂಬಳ ಬಾಕಿ ಇದೆ. ಈ ದಿಸೆಯಲ್ಲಿ ಸರ್ಕಾರ ತಾವು ರೋಗಗ್ರಸ್ಥ ಕಂಪನಿಗಳನ್ನು ಹುಟ್ಟು ಮಾಡಿ ತಾವು ಕೂಡ ರೋಗಗ್ರಸ್ಥರಾಗಿ, ಜನಗಳನ್ನು ರೋಗಗ್ರಸ್ಥರನ್ನಾಗಿ ಮಾಡತಕ್ಕ ಕೆಟ್ಟ ನೀತಿಯನ್ನು ಅನುಸರಿಸುವುದು ಬೇಡ. ಇನ್ನು ಮುಂದೆ ಮೆಹತಾ ಗುಂಪಿನವರು ಈ ರಾಜ್ಯದಲ್ಲಿ ಕಾರ್ಮಿಕರಿಗೆ ಮಾಡಿರತಕ್ಕ ಅನ್ಯಾಯ ಏನು ಇದೆ, ಆ ಅನ್ಯಾಯವನ್ನು ಸರಿಪಡಿಸಬೇಕಾದರೆ ಸರ್ಕಾರ ತುಂಬಾ ಜವಾಬ್ದಾರಿಯುತವಾಗಿ ತೆಗೆದುಕೊಳ್ಳಬೇಕಾಗಿದೆ. ದಯಮಾಡಿ ಇದಕ್ಕೆ ಕಾರ್ಮಿಕ ಮಂತ್ರಿಗಳು ಉತ್ತರ ಕೊಡಬೇಕು.

ಶ್ರೀ ಸಿ. ಗುರುನಾಥ್ : ಮಾನ್ಯ ಅಧ್ಯಕ್ಷರೆ, ಕರ್ನಾಟಕ ಬಾಲ್ ಬೇರಿಂಗ್ ಕಂಪನಿ ಲಿಮಿಟೆಡ್, ಮೈಸೂರಿನಲ್ಲಿ 450ಕ್ಕಿಂತ ಹೆಚ್ಚು ಕೆಲಸಗಾರು ಇಲ್ಲಿದ್ದಾರೆ, 1988ರಲ್ಲಿ ಈ ಕಾರ್ಖಾನೆ ಬಿಎಫ್ಆರ್ ಎಂದುರುಗಡೆ ಹೋಗಿ, ಅವರ ಕಡೆಯಿಂದ ಮತ್ತು ಹಣದ ಸಹಾಯವನ್ನು ಪಡೆದು ಕಾರ್ಯ ಮಾಡುತ್ತಿತ್ತು. ಆಮೇಲೆ ಮತ್ತೆ 1992-93 ಹಾಗೂ 1995ರವರೆಗೆ ಈ ಕಾರ್ಖಾನೆ ಕ್ಲೋಸ್ ಆಗಿದೆ. ಈ ಕಾರ್ಖಾನೆ ಮೇಲೆ ನಮ್ಮ ಇಲಾಖೆಯ ವತಿಯಿಂದ ಅವರು ಮಾಡಿಕೊಂಡ ಒಪ್ಪಂದದ ವಿರುದ್ಧವಾಗಿ ಕೇಸ್ ಸಹ ಹಾಕಿದ್ದಾರೆ. ಮತ್ತೆ ಈ ಕಾರ್ಖಾನೆಯವರು ಬಿಎಫ್ಆರ್ ಎದುರುಗಡೆ ಹೋಗಿ ಈ ರೋಗಗ್ರಸ್ಥ ಕಾರ್ಖಾನೆಗೆ ಹಣದ ಸಹಾಯವನ್ನು ಬೇಡಿರುತ್ತಾರೆ. ಅದಷ್ಟು ಬೇಗ ನಾವು ಮತ್ತೊಮ್ಮೆ ಈ ಕಾರ್ಖಾನೆಯ ಆಡಳಿತ ವರ್ಗದ ಮೇಲೆ ಕೇಸನ್ನು ಹಾಕಲು ವಿಚಾರ ಮಾಡುತ್ತಿದ್ದೇವೆ.

ಶ್ರೀ ಇ. ಮಾರುತಿರಾವ್ ಪವಾರ್ : ಮಾನ್ಯ ಅಧ್ಯಕ್ಷರೆ, ನಾನು ಮಂತ್ರಿಗಳಲ್ಲಿ ಕೇಳುವುದು ಏನು ಎಂದರೆ, ಮೈಸೂರು ನಗರದಲ್ಲಿ ಈ ರೀತಿಯಾದಂತಹ ರೋಗಗ್ರಸ್ಥ ಕಾರ್ಖಾನೆಗಳು ಒಂದಲ್ಲ, ಈಗ ಜೂನ್ ಐದು ತಾರೀಖು ಬಂದರೆ ಕೆ ಆರ್ ಮಿಲ್ಸ್ ಬೇಗ ಮುದ್ರೆ ಆಗಿ 13 ವರ್ಷ ಆಗಿತ್ತು. ಈಗತಾನೇ ಆರು ತಿಂಗಳ ಹಿಂದೆ ಅದರ ಬೇಗ ಮುದ್ರೆ ತೆರವು ಆಗಿದೆ. ಎಂ.ಎಂ.ಸಿ. ಕಾರ್ಖಾನೆಗೆ ಬೀಗಮುದ್ರೆ ಹಾಕಿ ಈಗಾಗಲೇ 8-9 ವರ್ಷಗಳಾದವು. ಅದೇ ರೀತಿ ಕೆ.ಬಿ.ಬಿ.ಸಿ. ಕಾರ್ಖಾನೆ ಸಹ 1993ರಲ್ಲಿ ಬೀಗಮುದ್ರೆಯಾಗಿದ್ದ ಈಗಾಗಲೇ ಮೂರು ವರ್ಷಗಳು ಕಳೆದುಹೋಗಿದೆ., ಈ ರೀತಿ ಬೀಗಮುದ್ರೆ ಹಾಕಿದರೆ ಅಲ್ಲಿ ಕೆಲಸ ಮಾಡುತ್ತಿದ್ದಂಥ ಕಾರ್ಮಿಕರುಗಳು ತಮ್ಮ ಹೆಂಡತಿ-ಮಕ್ಕಳೊಡನೆ ಹೇಗೆ ಜೀವನ ಸಾಗಿಸುತ್ತಾರೆ ಎಂಬುದು ಪ್ರಶ್ನೆ.

ಅಧ್ಯಕ್ಷರು : ಇದರ ಬಗ್ಗೆ ಇಡೀ ಕಾರ್ಮಿಕ ಇಲಾಖೆಯ ಕಾರ್ಯವೈಖರಿ ಕುರಿತು ಚರ್ಚಿಸಬೇಕಾಗುತ್ತದೆ. ಈಗ ಅದಕ್ಕೆ ಸಮಯವಿಲ್ಲದ್ದರಿಂದ ನನಗೂ ಆ ಬಗ್ಗೆ ಆಸಕ್ತಿ ಇದ್ದು ಇಲಾಖಾ ಬೇಡಿಕೆಗಳು ಚರ್ಚೆಗೆ ಬಂದಂಥ ಸಮಯದಲ್ಲಿ ಆಗ ತೆಗೆದುಕೊಳ್ಳೋಣ. ಈಗ ಕೆ.ಬಿ.ಬಿ.ಸಿ.ಗೆ. ಮಾತ್ರ ಕನ್ಫೈನ್ ಆಗಬೇಕು.

ಶ್ರೀ ಇ. ಮಾರುತಿರಾವ್ ಪವಾರ್ : ಬೀಗಮುದ್ರೆ ಹಾಕಿರುವ ಕಾರ್ಖಾನೆಗಳನ್ನು ತಕ್ಷಣ ತೆರೆಸಲು ಜಾಗ್ರತೆ ವಹಿಸಿ ಕಾರ್ಯಪ್ರವೃತ್ತರಾದರೆ ಕಾರ್ಮಿಕರಿಗೆ ತುಂಬಾ ಅನುಕೂಲವುಂಟಾಗುತ್ತದೆಂದು ತಮ್ಮ ಮುಖಾಂತರ ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಹೆಚ್.ಎನ್. ಶಂಕರಲಿಂಗೇಗೌಡ : ಸನ್ಮಾನ್ಯ ಅಧ್ಯಕ್ಷರೆ, ಕಾರ್ಮಿಕರ ಸಂಬಳ ಸುಮಾರು ಆರು ಕೋಟಿ ರೂಪಾಯಿಗಳಷ್ಟು ಬಾಕಿ ಇದ್ದು, ಇದನ್ನು ಕೊಡಿಸುವುದಕ್ಕೆ ಸರ್ಕಾರ ಮುಂಗಾದಬೇಕೆಂದು ನಾನು ಕಳಕಳಿಯಿಂದ ಪ್ರಾರ್ಥಿಸಿಕೊಳ್ಳುತ್ತಿದ್ದೇನೆ.

ಶ್ರೀ ಸಿ. ಗುರುನಾಥ್ : ಮಾನ್ಯ ಅಧ್ಯಕ್ಷರೆ, ಈಗಾಗಲೇ ದಿನಾಂಕ 24.3.1995 ರಂದು ಅಲ್ಲಿನ ಆಡಳಿತ ಮಂಡಳಿ ಜೊತೆ ಒಂದು ಒಪ್ಪಂದ ಮಾಡಿಕೊಂಡಿದ್ದು, ಅದರಲ್ಲಿ ಅವರು ಹೇಳಿಕೊಂಡಿದ್ದಾರೆ. ಅವರಿಗೆ ಬರಬೇಕಾದಂಥ ಸಂಬಳದ ಬಾಕಿ ಏನಿದೆ, ಅದನ್ನೆಲ್ಲಾ ಕೊಡುತ್ತೇವೆಂದು ನಮ್ಮ ಇಲಾಖಾ ವತಿಯಿಂದ ಒಂದು ಸಂಧಾನ ನಡೆದಂಥ ಸಮಯದಲ್ಲಿ ಅವರು ಹೇಳಿದರು. ಬಾಕಿ ಹಣ ಕೊಡದಿರುವ ಸನ್ನಿವೇಶದಲ್ಲಿ ಅವರ ಮೇಲೆ ನಾವು ಮೊಕದ್ದಮೆ ಹೂಡಲು ನಿರ್ಣಯ ತೆಗೆದುಕೊಳ್ಳುತ್ತಿದ್ದೇವೆ.

ಅಧ್ಯಕ್ಷರು : ಮೊಕದ್ದಮೆ ಹೂಡಿದ್ದೀರೋ?

ಶ್ರೀ ಸಿ. ಗುರುನಾಥ್ : ಮೊಕದ್ದಮೆ ಹೂಡುತ್ತಿದ್ದೇವೆ.

ಅಧ್ಯಕ್ಷರು : ಎಷ್ಟು ದಿವಸದಲ್ಲಿ ಮೊಕದ್ದಮೆ ಹೂಡುತ್ತೀರಿ?

ಶ್ರೀ ಸಿ. ಗುರುನಾಥ್ : ಸ್ವಲ್ಪ ದಿವಸದಲ್ಲೇ ಮೊಕದ್ದಮೆ ಹೂಡುತ್ತೇವೆ.

ಅಧ್ಯಕ್ಷರು : ಸ್ವಲ್ಪ ದಿವಸದಲ್ಲಿ ಅಂದರೆ ಎಷ್ಟು ದಿವಸದೊಳಗೆ ಮೊಕದ್ದಮೆ ಹೂಡುತ್ತೀರಿ?

ಶ್ರೀ ಸಿ. ಗುರುನಾಥ್ : ಇದಕ್ಕೆ ಕಾನೂನಿನ ರೀತ್ಯ ಒಂದು ನೋಟೀಸನ್ನು ಮೊದಲೇ ಕೊಡಬೇಕಾಗುತ್ತದೆ.

ಅಧ್ಯಕ್ಷರು : ನೋಟೀಸನ್ನು ಎಷ್ಟು ದಿವಸ ಮೊದಲು ಕೊಡಬೇಕು?

ಶ್ರೀ ಸಿ. ಗುರುನಾಥ್ : ಒಂದು ತಿಂಗಳೊಳಗೆ ಕೊಡಬೇಕು.

ಅಧ್ಯಕ್ಷರು : ಇನ್ನೆರಡು ತಿಂಗಳೊಳಗಾಗಿ ಪ್ರಕರಣವನ್ನು ಇತ್ಯರ್ಥಗೊಳಿಸಿ

ಶ್ರೀ ಸಿ. ಗುರುನಾಥ್ : ಇತ್ಯರ್ಥಗೊಳಿಸುತ್ತೇವೆ.

ಅಧ್ಯಕ್ಷರು : ಶ್ರೀ ಆರ್. ಕೃಷ್ಣಪ್ಪನವರು ಪ್ರತಿ ಸಲವೂ ಪ್ರಶ್ನೆ ಕಳುಹಿಸಿ ಅವರ ಪ್ರಶ್ನೆ ಬಂದಂಥ ಸಮಯದಲ್ಲಿ ಅವರು ಸದನದಲ್ಲಿರದೆ ಗೈರು ಹಾಜರಾಗುತ್ತಿದ್ದಾರೆಂದು ತಿಳಿಸುತ್ತಾ ಇನ್ನು ಮುಂದೆ ಇವರ ಪ್ರಶ್ನೆಗಳನ್ನು ಸದನದ ಮುಂದೆ ತರಕೂಡದೆಂದು, ಪ್ರಶ್ನೆಗಳನ್ನು ಸ್ವೀಕರಿಸಕೂಡದೆಂದು ಅಲ್ಲದೇ ಬ್ಯಾಲೆಟ್‌ನಲ್ಲಿ ಅವರ ಪ್ರಶ್ನೆ ಬಂದರೂ ಪರಿಗಣಿಸಕೂಡದೆಂದು ಆದೇಶಿಸುತ್ತೇನೆ.

ರಾಣೆಬೆನ್ನೂರು ತಾಲ್ಲೂಕಿನ ಬಸ್ ಅಭಾವ ನಿವಾರಣೆ.

132 - ಶ್ರೀ ವಿ.ಎಸ್. ಕರ್ಜಗಿ (ರಾಣೆಬೆನ್ನೂರು) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಣೆಬೆನ್ನೂರು ತಾಲ್ಲೂಕಿನಲ್ಲಿ ಬಸ್ಸಿನ ಅಭಾವವಿದ್ದು ಪ್ರಯಾಣಿಕರಿಗೆ ದಿನ ನಿತ್ಯ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗಿದ್ದಲ್ಲಿ ಹೆಚ್ಚಿನ ಬಸ್ಸುಗಳನ್ನು ಓಡಿಸಲು ಕ್ರಮ ಕೈಗೊಳ್ಳಲಾಗುವುದೇ.*

ಆ) *ರಾಣೆಬೆನ್ನೂರು ನಗರವು ದಿನೇ ದಿನೇ ಬೆಳೆಯುತ್ತಿದ್ದು ಸಿಟಿ ಬಸ್ಸುಗಳನ್ನು ರಾಣೆ ಬೆನ್ನೂರಿನಿಂದ ಕುನ್ನೂರು ಪಟ್ಟಣಕ್ಕೆ ಹಾಗೂ ರಾಣೆಬೆನ್ನೂರಿನಿಂದ ಮೂಡಬೆನ್ನೂರವರೆಗೆ ಮಾಡಲು ಸಾಧ್ಯವಿದೆಯೇ ಹಾಗಿದ್ದಲ್ಲಿ ಯಾವಾಗ?*

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಮಂತ್ರಿಗಳು) :

ಅ) ಇಲ್ಲ

ಆ) ಇಲ್ಲ